**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

# O.S. No. 175/2015

| | | |
|---|---|---|
| ಸಾಕ್ಷಿದಾರರ ಹೆಸರು | : | ಸುನಿಲ್ ಕುಮಾರ್ ಹೆಚ್.ವಿ. |
| ತಂದೆಯ ಹೆಸರು | : | ವೆಂಕಟರಾಮು ಎಂ.ಎ. |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಖಾಸಗಿ ಉದ್ಯೋಗ |
| ವಾಸಸ್ಥಳ | : | ಹೆಚ್.ಡಿ. ಕೋಟೆ ಟೌನ್. |

**ಸಾಕ್ಷಿಯನ್ನು ದಿನಾಂಕಃ 02.01.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ಬಿ.ವಿ.ಎಸ್. ವಕೀಲರಿಂದಃ**

ನಾನು ಈ ಪ್ರಕರಣದಲ್ಲಿ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆ ಬಾಬ್ತು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ.

ದಿನಾಂಕಃ 25.06.2012ರ ನೋಂದಾಯಿತ ಕ್ರಯದ ಕರಾರು ಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.–1 ಎಂದು ಗುರುತಿಸಲಾಯಿತು.

ದಿನಾಂಕಃ 16.04.2015 ರಂದು ನಮ್ಮ ವಕೀಲರ ಮೂಲಕ ಪ್ರತಿವಾದಿಗಳಿಗೆ ನೀಡಿದ ಲೀಗಲ್ ನೋಟೀಸ್ ನ ಕಛೇರಿ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.–2 ಎಂದು ಗುರುತಿಸಲಾಯಿತು.

03 ಅಂಚೆ ರಸೀದಿಗಳನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ಕ್ರಮವಾಗಿ ನಿ.ಪಿ.–3 ರಿಂದ ನಿ.ಪಿ.–5 ಎಂದು ಗುರುತಿಸಲಾಯಿತು.

2 ನೇ ಪ್ರತಿವಾದಿಗೆ ಕಳುಹಿಸಿದ ಲೀಗಲ್ ನೋಟೀಸ್ ಜಾರಿಯಾದ ಬಗ್ಗೆ ಅಂಚೆ ಇಲಾಖೆಯವರು ಜಾರಿ ಮಾಡಿ ವಾಪಸ್ ನೀಡಿರುವ ಅಂಚೆ ಸ್ವೀಕೃತಿ ಪತ್ರವನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.-6 ಎಂದು ಗುರುತಿಸಲಾಯಿತು.

ಮೃತ 1 ನೇ ಪ್ರತಿವಾದಿಗೆ ಲೀಗಲ್ ನೋಟೀಸ್ ಜಾರಿಯಾದ ಬಗ್ಗೆ ಅಂರ್ತಜಾಲದ ಮೂಲಕ ತೆಗೆದ ಪ್ರಿಂಟ್ ನ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.-7 ಎಂದು ಗುರುತಿಸಲಾಯಿತು.

3 ನೇ ಪ್ರತಿವಾದಿಗೆ ಕಳುಹಿಸಿದ ಲೀಗಲ್ ನೋಟೀಸ್ not claimed ಎಂಬ ಷರಾದೊಂದಿಗೆ ವಾಪಸ್ ಬಂದಿದ್ದು, ತೆರೆದ ನ್ಯಾಯಾಲಯದಲ್ಲಿ ಅಂಚೆ ಲಕೋಟೆಯನ್ನು ತೆರೆದು ನೋಡಲಾಗಿ ಅದರಲ್ಲಿ ಲೀಗಲ್ ನೋಟೀಸಿನ ಪ್ರತಿ ಇರುತ್ತದೆ. ಆದ್ದರಿಂದ ಸದರಿ ಲೀಗಲ್ ನೋಟೀಸಿನ ಪ್ರತಿಯನ್ನು ನಿ.ಪಿ.-8 ಎಂದು, ಅಂಚೆ ಲಕೋಟೆಯನ್ನು ನಿ.ಪಿ.-9 ಎಂದು ಗುರುತಿಸಲಾಯಿತು.

1 ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.-10 ಎಂದು ಗುರುತಿಸಲಾಯಿತು.

**<u>ಪಾಟಿ ಸವಾಲು:</u> ಮಾನ್ಯ ಪ್ರತಿವಾದಿಗಳ ಪರ ವಕೀಲರು ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**